ಸಾಕ್ಷಿಯನ್ನು ದಿನಾಂಕ: 14.08.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ- 1 ನೇ ಎದುರುದಾರರ ಪರ ಶ್ರೀ ಕೆ ಎಲ್ ಬಿ ವಕೀಲರಿಂದ

ನಾನು ಕೆ ಎಸ್ ಆರ್ ಟಿ ಸಿ ಬಸ್ಸಿನ ನಿರ್ವಾಹಕನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಕಂಟೈನರ್ ವಿಮಾ ಕಂಪೆನಿಯ ವಿರುದ್ದ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿರುವುದಿಲ್ಲ. ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಾಗಿರುವುದಿಲ್ಲ. ನಾನು ಮೊದಲು ಆನಂದಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ಶಿವಮೊಗ್ಗದ ಮ್ಯಾಕ್ಸ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಈಗಲೂ ಕೆ ಎಸ್ ಆರ್ ಟಿ ಸಿ ಬಸ್ಸಿನ ನಿರ್ವಾಹಕನಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ಅಪಘಾತ ಆದ ನಂತರ 2 ತಿಂಗಳುಗಳ ಕಾಲ ರಜೆಯಲ್ಲಿ ಇದ್ದ ಬಗ್ಗೆ ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲ. ಹೆಚ್ಚಿನ ವೈದ್ಯಕೀಯ ಚಿಕಿತ್ಸೆ ಬೇಕು ಎಂದು ಹೇಳುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ವಿಶೇಷ ಆಹಾರ ಸೇವಿಸಿದ ಖರ್ಚಿನ ಬಗ್ಗೆ ಮತ್ತು ಪ್ರಯಾಣದ ಬಗ್ಗೆ ಯಾವುದೇ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ನಮ್ಮ ಬಸ್ ಚಾಲಕನಿಗೆ ಚಾಲನಾ ಪರವಾನಿಗೆ ಇತ್ತು ಮತ್ತು ಬಸ್ ಗೆ ವಿಮೆ ಇತ್ತು ಎಂದರೆ ಸರಿ. ಅಪಘಾತ 1 ನೇ ಎದುರುದಾರರ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ನನಗೆ ಹೇಳಲು ಆಗುವುದಿಲ್ಲ.

ಪಾಟೀ ಸವಾಲು 2 ನೇ ಎದುರದಾರರ ಪರ ವಕೀಲರಿಂದಃ

2 ನೇ ಎದುರುದಾರರ ಪರ ವಕೀಲರು ಗೈರು ಹಾಜರಾದ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

(ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂಡಾಧಿಕಾರಿಗಳು, ಸಾಗರ.